ಸರಿಯಾಗಿದೆ ಎಂದು ಯಾರೂ ಸರ್ಟಿಫಿಕೇಟ್ ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಲಿಕ್ಕೆ ಹಿಂಜರಿಯುವುದಿಲ್ಲ.

ಶ್ರೀ ಎಸ್. ಎಂ ಶೀರ್ನಾಳಿ ಚಂದ್ರಶೇಖರ್ (ಹೊಸನಗರ) —ಶಿವಮೊಗ್ಗ ಜಿಲ್ಲೆಯ ಹೊಸನಗರ ಟೌನಿನಲ್ಲಿ ಆಂದರೆ ಪುರಸಭಾ ಆವರಣದಲ್ಲಿ ಪಾಸ ಮಾಡತಕ್ಕಂಥ ಪ್ರಜೆಗಳು ಕುಡಿಯುವ ನೀರಿಗಾಗಿ ತೀವ್ರವಾಗಿ ಸಂಕಟ ಪಡುತ್ತಿರುವ ವಿಚಾರದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಹೇಳಿಕೆಯನ್ನು ಮಾಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

The water Supply Scheme for Hosanagar Town was commissioned in 1972 and is being maintained by the Town Municipal Committee, Hosanagar, since 5-12-1973. The present source of water supply consists of 3 bore-wells yielding, totally about 2860 Gallons per hour. The population of the town as per 1971 census is 3,800. The per capita supply is much below the standard. The borewells in this area are generally not successful and yield goes on dwindling during summer. The Geologist has opined that borewell as a source of supply to town like Hosanagar will not be successful due to yield being low. It is therefore proposed to provide comprehensive water supply scheme to Hosanagar with a permanent source *viz.*, Kallahalla to solve the drinking water supply problem. The Kallahalla Nala is flowing at a distance of 1½ km from the town towards West. A line estimate amounting to Rs. 10 lakhs has been prepared by the Karnataka Urban Water Supply and Drainage Board. If the Town Municipal Committee, Hosanagar comes forward to pay 10% contribution of the cost along with the necessary resolution, regarding financial feasibility etc., then the scheme will be considered and administrative approval will be accorded.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಒಂದು ವಿಚಾರದಲ್ಲಿ ಮಂತ್ರಿಗಳಿಗೆ ನಾನು ಸಂಪೂರ್ಣವಾಗಿ ಅಭಾರಿಯಾಗಿದ್ದೇನೆ. ಏಕೆಂದರೆ, ಹೊಸನಗರದಲ್ಲಿ ತೀವ್ರವಾದಂಥ ಕುಡಿಯುವ ನೀರಿನ ಅಭಾವವಿದೆ ಎನ್ನುವುದನ್ನು ಆಪರು ಒಪ್ಪಿಕೊಂಡಿದ್ದಾರೆ, ಅದಕ್ಕೆ ವಂದನೆಗಳು. ನಮ್ಮಲ್ಲಿ ಒಂದು ಗಾದೆಇದೆ, ಅದೇನೆಂದರೆ, ''ಮದುವೆಯಾಗುವವರೆಗೆ ಹುಚ್ಚು ಬಿಡುವುದಿಲ್ಲ, ಹುಚ್ಚು ಬಿಡುವವರೆಗೆ ಮದುವೆಯಾಗುವುದಿಲ್ಲ'' ಎಂದು. ೧೦ ಪರ್ಸೆಂಟ್ ಅಂದರೆ ಒಂದು ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅದು ಕೇವಲ ಕನಸಿನ ಕುದುರೆ. ಆಕ್ಟ್ಯುಯ್ ತೆಗೆದಿದ್ದಾರೆ, ಆದರೆ ಆಕ್ಟ್ಯುಯ್ ತೆಗೆದ ಮೇಲೆ ಮುನಿಸಿಪಾಲಿಟಿಗೆ ತನ್ನ ನೌಕರರಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇದೆಯೋ ಇಲ್ಲವೋ ಗೊತ್ತಿಲ್ಲ. ಇದು ಮುಖ್ಯವಾಗಿ ನೀರಿನ ಸಮಸ್ಯೆ ಬೇರೆ ಸಮಸ್ಯೆಗಳಾದರೆ ಲಘುವಾಗಿ ತೆಗೆದುಕೊಳ್ಳಬಹುದು. ಮೂರು ನಾಲ್ಕು ಪರ್ಷಗಳಿಂದ ಅಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಇಂಥಾ ಒಂದು ಪರಿಸ್ಥಿತಿಯಲ್ಲಿ ಕಾನೂನಿನ ಅಡಚಣೆ ಇದ್ದರೆ ಅದನ್ನು ಸಡಿಲಗೊಳಿಸಿ ಏನಾದರೂ ಪರಿಹಾರ ಕಂಡು ಹಿಡಿಯುತ್ತೀರಾ ? ೧೦ ಪರ್ಸೆಂಟ್ ಅಂದರೆ ಒಂದು ಲಕ್ಷ ರೂಪಾಯಿ ಕೊಡಬೇಕಾಗುತ್ತದೆ ಎಂಬುದು ನನಗೆ ಗೊತ್ತಿದೆ. ಮುನಿಸಿಪಾಲಿಟಿಯನ್ನು ಹರಾಜು ಹಾಕಿದರೂ ಅಷ್ಟು ದುಡ್ಡು ಸಿಗುವುದಿಲ್ಲ. ಇದಕ್ಕೇನು ಮಾಡುತ್ತೀರಿ ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಶೀರ್ನಾಳಿ ಚಂದ್ರಶೇಖರ್‌ರವರು ತಮ್ಮ ಕ್ಷೇತ್ರವಾದಂಥ ಹೊಸನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿದೆಯೆಂಬುದನ್ನು ಬಹಳ ಕಳಕಳಿಯಿಂದ ವ್ಯಕ್ತಪಡಿಸಿದ್ದಾರೆ. ಈಗಾಗಲೇ ನಾವು ಆಲ್ಲಿರತಕ್ಕ ಜನಸಂಖ್ಯೆಯ ಆಧಾರದ ಮೇಲೆ ೧೦ ಲಕ್ಷ ರೂಪಾಯಿಗಳ ಸ್ಕೀಮನ್ನೂ ಕೂಡ ಪ್ರಿಪೇರ್ ಮಾಡಿದ್ದೇವೆ. ಇದರ ಬಗ್ಗೆ ದಿನಾಂಕ ೨೭-೨-೧೯೮೦ಕ್ಕೆ ಮುನಿಸಿಪಲ್ ಅಧ್ಯಕ್ಷರಿಗೆ ಪತ್ರ ಬರೆದಿದ್ದೇವೆ. ಆದರೆ ಇಲ್ಲಿಯವರೆಗೆ ಮುನಿಸಿಪಲ್ ಅಧ್ಯಕ್ಷರು ೧೦ ಪರ್ಸೆಂಟ್ ಕೊಡುವುದಕ್ಕೆ ಆಗುತ್ತದೆ ಎಂದಾಗಲೀ ಅಥವಾ ಫೈನಾನ್ಷಿಯಲ್ ಪೊಜಿಷನ್ ಚೆನ್ನಾಗಿಲ್ಲವೆಂದು ಆಗಲಿ ಪತ್ರದ ಮೂಲಕ ನಮಗೆ ತಿಳಿಸಿಲ್ಲ. ಆದರೂ ಕೂಡ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಕೇಳಿಕೊಳ್ಳುತ್ತಾ ಇದ್ದೇನೆ, ನೀವು ಆ ಮತ ಕ್ಷೇತ್ರವನ್ನು ಪ್ರತಿನಿಧಿಸುತ್ತಾ ಇದ್ದೀರಿ, ಆದಕಾರಣ ತಾವು ಮುನಿಸಿಪಲ್ ಅಧ್ಯಕ್ಷರಿಗೆ ಹೇಳಿ. ಆವರಿಂದ ಒಂದು ಪತ್ರ ಬರಲಿ, ೧೦ ಪರ್ಸೆಂಟ್ ಹಣ ಕೊಡುವುದಕ್ಕೆ ಸಾಧ್ಯವಿಲ್ಲದೇ ಹೋದರೆ ಡೆವಲಪ್‌ಮೆಂಟ್ ಗ್ರಾಂಟ್‌ನಲ್ಲಿ ಎಮರ್ಜೆನ್ಸಿ ವಾಟರ್ ಸಪ್ಲೈ ಸ್ಕೀಂ ಎಂದು ಟ್ರೀಟ್ ಮಾಡಿ ಕೊಡತಕ್ಕ ಪ್ರಯತ್ನ ಮಾಡುತ್ತೇವೆ. ಆಲ್ಲಿ ಬೋರ್‌ವೆಲ್ ಕೂಡ ಹಾಕತಕ್ಕ ಪರಿಸ್ಥಿತಿ ಇಲ್ಲ. ಏಕೆಂದರೆ ಆಲ್ಲಿಗೆ ಒಂದೂವರೆ ಕಿಲೋಮೀಟರ್ ದೂರದಲ್ಲಿ ಕಲ್ಲಹಳ್ಳಿ ಎಂಬ ಯೋಜನೆ ತಯಾರಾಗಿದೆ. ತಾವು ಮುನಿಸಿಪಲ್ ಅಧ್ಯಕ್ಷರಿಗೆ ಹೇಳಿ, ಆವರು ಈ ಸ್ಕೀಂಗೆ ಒಪ್ಪುತ್ತೇವೆ ಎಂದು ಪತ್ರ ಬರೆದರೆ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಇಡೀ ಕ್ಷೇತ್ರದ ಪ್ರತಿನಿಧಿಯಾಗಿ ನಾನು ಹೇಳುತ್ತಾ ಇದ್ದೇನೆ, ಇಡೀ ಹೊಸನಗರ ತಾಲೂಕಿನಲ್ಲಿ ಆವರಿಸಿಕೊಂಡಿದೆ. ೧೦ ವರ್ಷಗಳ ಹಿಂದೆ ಇದ್ದಂಥ ಉತ್ಪತ್ತಿಯಲ್ಲಿ ಇವತ್ತು ಆದರ ಕಾಲಂಶ ಕೂಡ ಉತ್ಪತ್ತಿ ಇಲ್ಲ. ಇದನ್ನು ಸ್ಪೆಷಲ್ ಕೇಸಾಗಿ ತೆಗೆದುಕೊಂಡು ಸರ್ಕಾರ ಆನುದಾನ ಕೊಟ್ಟು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಈ ಬಗ್ಗೆ ಮುನಿಸಿಪಲ್ ಅಧ್ಯಕ್ಷರು ನನಗೆ ಹೇಳಿರುವುದರಿಂದ ನಾನು ಈ ಗಮನ ಸೆಳೆಯುವ ಸೂಚನೆಯನ್ನು ಕೇಳಿಸಿಕೊಟ್ಟಿರುವುದು. ನಾನು ಆ ಕ್ಷೇತ್ರದ ಪ್ರತಿನಿಧಿಯಾಗಿ ಹೇಳುತ್ತಿರುವಾಗ ಪುನಃ ಪತ್ರ ಏಕೆ ಬೇಕು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮುನಿಸಿಪಲ್ ಅಧ್ಯಕ್ಷರಿಗೆ ಪತ್ರ ಬರೆಯಲಿಕ್ಕೆ ಹೇಳಿ, ಆವರಿಂದ ಪತ್ರ ಬಂದ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಂಡು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮುನಿಸಿಪಾಲಿಟಿಗೆ ೧೦ ಪರ್ಸೆಂಟ್ ಹಣ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಒಂದು ವೇಳೆ ೧೦ ಪರ್ಸೆಂಟ್ ಹಣ ಕೊಡುವುದಕ್ಕೆ ಸಾಧ್ಯವಿಲ್ಲದೇ ಹೋದರೆ ನಾವು ಡೆವಲಪ್‌ಮೆಂಟ್ ಗ್ರಾಂಟ್‌ನಲ್ಲಿ ಕೊಡುತ್ತೇವೆಂದು ಹೇಳಿದ್ದೇನೆ. ನಾವು ದಿನಾಂಕ ೨೭-೨-೧೯೮೦ ರಂದು ಮುನಿಸಿಪಲ್ ಅಧ್ಯಕ್ಷರಿಗೆ ಪತ್ರ ಬರೆದಿದ್ದೇವೆ, ಆದಕ್ಕೆ ಉತ್ತರ ಬರಲಿ, ಆವರಿಗೆ ೧೦ ಪರ್ಸೆಂಟ್ ಕೊಡುವುದಕ್ಕೆ ಆಗದಿದ್ದ ಪಕ್ಷದಲ್ಲಿ ಡೆವಲಪ್‌ಮೆಂಟ್ ಗ್ರಾಂಟ್‌ನಲ್ಲಿ ನಾವು ಹಣ ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ ಮತ್ತು ಪುತ್ತ ಸ್ಕೀಮನ್ನು ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೇ, ಸವದತ್ತಿ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ೧೦೦ ದಿನಗಳ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಆದ ಹಣದ ಆವಶ್ಯಯ ಮತ್ತು ಆ ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಆದಂಥ ಅಡಚಣೆ ಹಾಗೂ ನಿಷ್ಕ್ರಿಯತೆ ಬಗ್ಗೆ ತಮ್ಮ ಮುಖಾಂತರ ಮಾನ್ಯ ಹಣಕಾಸಿನ ಮಂತ್ರಿಗಳ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—(ಆರ್ಥಿಕ ಹಾಗೂ ಯೋಜನಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕೆಳಕಂಡ ಸ್ಟೇಟ್‌ಮೆಂಟನ್ನು ಮಾಡುವುದಕ್ಕೆ ತಮ್ಮ ಅನುಮತಿಯೆನ್ನು ಕೋರುತ್ತೇನೆ.

Employment Affirmation Scheme was taken up in the blocks of Soundatti, Bailahongal and Ramdurg in Belgaum district during 1979